ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ಅರ್ಜಿದಾರರಿಗೆ ಪ್ರಾರಂಭದಲ್ಲೆ ನಾನೇ ಚಿಕಿತ್ಸೆ ನೀಡಿರುತ್ತೇನೆ. ನಿಪಿ-13 ದಾಖಲೆ ನಮ್ಮ ಆಸ್ಪತ್ರೆಯ ದಾಖಲೆಯಾಗಿರುತ್ತದೆ. ಅರ್ಜಿದಾರರು ಮೊದಲು ದಿನಾಂಕ 20.02.2023ರಂದು ಆಸ್ಪತ್ರೆಗೆ ದಾಖಲಾಗಿರುತ್ತಾರೆ. ನಾನೇ ಶಸ್ತ್ರ ಚಿಕಿತ್ಸೆ ನೀಡಿರುತ್ತೇನೆ. ದಿನಾಂಕ 27.02.2023ರಂದು ಅರ್ಜಿದಾರರು ನಮ್ಮ ಆಸ್ಪತ್ರೆಯಿಂದ ಬಿಡುಗಡೆಯಾದ ಮುಂದುವರೆದ ಚಿಕಿತ್ಸೆಯನ್ನು ತೆಗೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಎಕ್ಸಟ್ರನಲ್ ಫಿಕ್ಸೇಷನ್ ಹಾಕಿರುತ್ತೇವೆ ಅದನ್ನು ತೆಗೆಸಲ ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ದಿನಾಂಕ 10.04.2023ರಂದು ಅರ್ಜಿದಾರರು ಫಿಕ್ಸೇಷನ್ ತೆಗೆಸಿರುತ್ತಾರೆ ಎಂದರೆ ಸರಿ. ದಿನಾಂಕ 19.07.2023ರಂದು ಅರ್ಜಿದಾರರಿಗೆ ಸೋಂಕು ಉಂಟಾಗಿದ್ದರಿಂದ ನಮ್ಮ ಆಸ್ಪತ್ರೆಗೆ ಒಳರೋಗಿ ದಾಖಲಾಗಿರುತ್ತಾರೆ. ಗಾಯಾಳು ಸರಿಯಾದ ಮುಂದುವರೆದ ಚಿಕಿತ್ಸೆ ಪಡೆದುಕೊಳ್ಳದೇ ಇದ್ದರಿಂದ ಸೋಂಕು ಉಂಟಾಗಿ ಪುನಃ ಆಸ್ಪತ್ರೆಗೆ ಒಳರೋಗಿಯಾಗಿ ದಾಖಲಾಗು ಸಂದರ್ಭ ಉಂಟಾಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರು ಕೊನೆಯ ಬಾರಿಗೆ ದಿನಾಂಕ 22.11.2023 ರಂದು ಪ್ಲಾಸ್ಟಿಕ್ ಸರ್ಜರಿ ಮಾಡಿ ಕಳುಹಿಸಿರುತ್ತೇವೆ. ಅರ್ಜಿದರರು ಮೇಲೆ ಹೇಳಿದ ಎಲ್ಲಾ ದಿನಾಂಕಗಳಂದು ಆಸ್ಪತ್ರೆಗೆ ಒಳರೋಗಿ ದಾಖಲಾಗಿದ್ದು ಮುಂದುವರೆದ ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಓ.ಪಿ.ಡಿ ಸ್ಲಿಪ್ ಗಳನ್ನು ನಾನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿನಾಂಕ 07.10.2024ರಂದು ಅರ್ಜಿದಾರರಿಗೆ ಡಿಸೆಬಿಟಿಟಿ ಅಸೆಸ್‌ಮೆಂಟ್ ಅನ್ನು ಒಂದು ವರ್ಷದ ನಂತರ ನೀಡಿರುತ್ತೇನೆ ಎಂದರೆ ಸರಿ. ಡಿಸೆಬಿಟಿಟಿ ಅಸೆಸ್‌ಮೆಂಟ್ ಪರೀಕ್ಷಾ

ಎಂ.ವಿ.ಸಿ ನಂ.207/2023ರಲ್ಲಿ
ಪಿ.ಡಬ್ಲ್ಯೂ -2(ಡಾಃ ವೆಂಕಟರಾಮ್ ಕುಮಾರ್ ಕೆ)

ಸಮಯದಲ್ಲಿ ಅರ್ಜಿದಾರರಿಗೆ ಉಂಟಾಗಿದ್ದ ಮೂಳೆ ಮುರಿತ ಜೋಡಣೆಯಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ನಾವು ಅಳವಡಿಸಿರುವ ಇಂಪ್ಲಾಂಟ್ ಅನ್ನು ಹೊರತೆಗೆದೆ ಡಿಸೆಬಿಟಿಟಿ ಅಸೆಸ್‌ಮೆಂಟ್ ಮಾಡಿರುತ್ತೇನೆ ಎಂದರೆ ಸರಿ. ಇಂಪ್ಲಾಂಟ್ ಹೊರತೆಗೆಯದೆ ಮತ್ತು ಅರ್ಜಿದಾರರು ಮುಂದುವರೆದ ಚಿಕಿತ್ಸೆಯನ್ನು ಸರಿಯಾಗಿ ತೆಗೆದುಕೊಳ್ಳದೇ ಇರುವ ಕಾರಣ ಅಂಗನ್ಯೂನ್ಯತೆ ಅಂಶ ಏರುಪೇರಾಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಪ್ರಮಾಣ ಪರಿಹಾರ ಸಿಗಲಿ ಎಂದು ಹೆಚ್ಚಿನ ಪ್ರಮಾಣದ ಅಂಗ ನ್ಯೂನ್ಯತೆಯ ಅಂಶವನ್ನು ಬರೆದಕೊಟ್ಟು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು